ಗೋಳಾಡುತ್ತಿದ್ದಳು.

ಕಳೆದ ಬಾರಿ ಬಾಬು ರಜಕ್ಕೆ ಮನೆಗೆ ಬಂದ ಸಂತೋಷಕ್ಕೆ ಸುಬ್ಬಮ್ಮ ಮತ್ತು ಕುಸುಮಾ ಸೇರಿಕೊಂಡು ಅವನಿಗೆ ಇಷ್ಟವಾದ ಕಾಯಿಒಬ್ಬಟ್ಟು ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಬಾಬಣ್ಣನಿಗೆ ಒಬ್ಬಟ್ಟು ಅಂದರೆ ಅದರಲ್ಲೂ ಕಾಯಿಒಬ್ಬಟ್ಟು ಎಂದರೆ ಚಿಕ್ಕಂದಿನಿಂದಲೂ ಅಷ್ಟು ಇಷ್ಟ. ಎಲ್ಲ ಹಬ್ಬಕ್ಕೂ ಅದನ್ನೇ ಮಾಡು ಎಂದು ತಾಯಿಯನ್ನು ಒತ್ತಾಯಿಸುತ್ತಿದ್ದನು. ಇವನು ರಜೆಯಲ್ಲಿ ಊರಿನಲ್ಲಿದ್ದಾಗ ಅತ್ತ ಕಾಶ್ಮೀರದಲ್ಲಿ ಉಗ್ರಗಾಮಿಗಳು ಪಾಕಿಸ್ತಾನದ ಕುಮ್ಮಕ್ಕಿನಿಂದ ನಮ್ಮ ದೇಶದ ಹಲವು ನಾಗರಿಕರನ್ನು ಕೊಂದು, ಎರಡು ದೇಶಗಳ ನಡುವೆ ಉದ್ವಿಗ್ನತೆ ಶುರುವಾಗಿ ಯುದ್ಧ ಶುರುವಾಗಿತ್ತು. ಸೈನ್ಯದಲ್ಲಿದ್ದ ಎಲ್ಲರ ರಜೆಗಳನ್ನು ಕ್ಯಾನ್ಸಲ್ ಮಾಡಿ, ತಕ್ಷಣ ಕರ್ತವ್ಯಕ್ಕೆ ಹಾಜರಾಗಲು ಕರೆ ಕೊಡಲಾಗಿತ್ತು. ಹಾಗಾಗಿ ಬಾಬು ಕೂಡ ಕರ್ತವ್ಯಕ್ಕೆ ಹಾಜರಾಗಲು ತಕ್ಷಣವೇ ಹೊರಟುನಿಂತ. ನಿನಗೆ ಇಷ್ಟವಾದ ಕಾಯಿಹೋಳಿಗೆಯನ್ನು ಮಾಡುತ್ತಿದ್ದೇವೆ, ತಿಂದು ಹೋಗು ಎಂದು ಎಷ್ಟು ಬಲವಂತ ಮಾಡಿದರೂ ಕೇಳದೆ, ತನ್ನ ದೇಶ ಯುದ್ಧದಲ್ಲಿರುವಾಗ ತಾನು ಒಬ್ಬಟ್ಟು ತಿನ್ನುತ್ತಾ ಕುಳಿತುಕೊಳ್ಳುವುದು ಅಷ್ಟು ಸರಿಯಲ್ಲ ಎಂದು ಹೇಳಿದನು. ಯುದ್ಧದಲ್ಲಿ ಜಯಿಸಿ ಮತ್ತೆ ಬಂದು ಖುಷಿಯಿಂದ ಕಾಯಿಒಬ್ಬಟ್ಟು ತಿನ್ನುತ್ತೇನೆ ಎಂದು ಹೇಳಿ, ತಾಯಿಗೆ ಕಾಲಿಗೆ ನಮಸ್ಕರಿಸಿ ಹೊರಟುಹೋಗಿದ್ದ ಮಗ, ಹೀಗೆ ಹೆಣವಾಗಿ ಮನೆಗೆ ಬರುತ್ತಾನೆಂದು ಸುಬ್ಬಮ್ಮ ಕನಸು ಮನಸ್ಸಿನಲ್ಲೂ ನಿರೀಕ್ಷಿಸಿರಲಿಲ್ಲ.



ಬಾಬಣ್ಣನ ಹೆಣ ಮನೆಯ ಹತ್ತಿರ ತರುತ್ತಿದ್ದಂತೆ ನೆರೆದಿದ್ದ ಜನಸ್ತೋಮ 'ಹುತಾತ್ಮ, ವೀರಯೋಧ ಬಾಬಣ್ಣನಿಗೆ ಜಯವಾಗಲಿ, ಜೈಹಿಂದ್' ಎಂಬ ಘೋಷಣೆಗಳನ್ನು ಕೂಗ ತೊಡಗಿದರು. ಅಷ್ಟು ಹೊತ್ತು ಅಳುವುದನ್ನು ಮರೆತು ಕುಳಿತಿದ್ದ ಸುಬ್ಬಮ್ಮನು ಮಗನ ಹೆಣ ಕಂಡ ತಕ್ಷಣ ಅವನನ್ನು ತಬ್ಬಿಕೊಂಡು ಮತ್ತೆ ರೋದಿಸತೊಡಗಿದಳು. ಮಗನ ಮುಖದ ತೇಜಸ್ಸು ಇನ್ನೂ ಮಾಸಿರಲಿಲ್ಲ. ಅವನ ಬಾಲ್ಯದ ತುಂಟಾಟಗಳು, ತನ್ನ ಮಾತಿಗೆ ಅವನು ಕೊಡುತ್ತಿದ್ದ ಗೌರವ, ತನ್ನ ಮೇಲಿಟ್ಟಿದ್ದ ಪ್ರೀತಿ ಎಲ್ಲಾ ಕಣ್ಣಮುಂದೆ ಬಂದು ಸುಬ್ಬಮ್ಮಳು ಕೂತಲ್ಲಿ ಕೂರಲಾಗದೆ, ನಿಂತಲ್ಲಿ ನಿಲ್ಲಲಾಗದೆ ಶತಪಥ ಹಾಕುತ್ತಾ, ಮನಸ್ಸಿನ ಸ್ಥಿಮಿತ ಕಳೆದುಕೊಂಡವಳಂತೆ ಯಾರ್‍ಯಾರಿಗೋ ಶಾಪ ಹಾಕುತ್ತಾ ಮಣ್ಣು ತೂರತೊಡಗಿದಳು. ಅವಳ ಅಸಹಾಯಕತೆ ಈಗ ಕ್ರೋಧವಾಗಿ ಪರಿವರ್ತನೆಯಾಗಿತ್ತು. ಆಕ್ರೋಶದ ಕಟ್ಟೆ ಒಡೆದಿತ್ತು. ಅವಳ ಆಕ್ರೋಶ ಶತ್ರುಗಳ ಮೇಲಾ, ರಾಮೇಗೌಡರ ಮೇಲಾ ಅಥವಾ ತನಗೆ ಈ ಸ್ಥಿತಿ ತಂದ ಭಗವಂತನ ಮೇಲಾ ತಿಳಿಯಲಿಲ್ಲ.